ಸ್ಪರ್ಶಿಸಿದಾಗ ರೋಮಾಂಚನಗೊಂಡಳು. ತೆರೆಗಳು ಹಸಿಯಾಗಿಸಿದಲ್ಲಿ ಉಸುಕಿನ ಕಣಗಳು ಅಂಟಿಕೊಂಡು ಅಂಗಳದಂತೆ ಆಗಿತ್ತು. ಅಲ್ಲಿ ರಂಧ್ರ ಕೊರೆದು ಹೊರಬರುವ ಏಡಿಮರಿಗಳು ಅವಳ ಕಾಲುಗಳಿಗೆ ಕಚಗುಳಿ ಮಾಡಿದವು. ಮಕ್ಕಳು ಬಾವಿ ತೋಡುವ, ಗೋಪುರ ಕಟ್ಟುವ ಆಟ ಆಡುತ್ತಿದ್ದರು. ಸುಮಿಗೂ ಅಂಥ ಆಸೆಯಾಯಿತು. ವಿರುಪಾಕ್ಷಿ ಅದನ್ನು ಅವಳ ಕಣ್ಣುಗಳಲ್ಲೇ ಗ್ರಹಿಸಿ, 'ಸನ್ಸೆಟ್ ನೋಡಿ ಹೋಗೂಣು, ಸಾಕು' ಅಂದ. ಸೂರ್ಯ ಕೆಂಪಾಗಿದ್ದ. ಆಕಾಶ ಕೆಂಪಾಗಿತ್ತು. ಆ ಕೆಂಪು ನೀರಿಗೂ ಬೆರೆಯುತ್ತಿತ್ತು. ಸೂರ್ಯನು ಇಂಚಿಂಚು ಇಳಿದು ಹೋಗುವ ಆ ಭವ್ಯ ದೃಶ್ಯದಲ್ಲಿ ಮೈಮರೆತಿದ್ದಳು. 'ನಾಳೆ ಬರೋಣು, ಬಾ' ಎಂದು ವಿರೂಪಾಕ್ಷಿ ಅವಳನ್ನು ಎಚ್ಚರಿಸಿದ. 'ದಿನಾ ಬರೋಣು' ಅಂದಳು.

ಕಾರವಾರದಲ್ಲಿ ಇವರಿದ್ದ ಮನೆ ಸಮುದ್ರ ತೀರದಿಂದ ಒಂದೆರಡು ಮೈಲು ಅಷ್ಟೇ ದೂರವಿತ್ತು. ವಿರುಪಾಕ್ಷಿ ಆಫೀಸಿನಿಂದ ಬಂದೊಡನೆ ಅವನ ಜೊತೆ ದಿನಾ ಸಂಜೆ ಬೀಚಿಗೆ ಹೊರಡುವಳು. ಏನೋ ಹೊಸದರಲ್ಲಿ ಹೀಗೆ ಆಕರ್ಷಣೆ ಇರತ್ತೆತಿ ಬಿಡು ಎಂದು ವಿರುಪಾಕ್ಷಿ ಅಂದುಕೊಂಡಿದ್ದ. ಆದರೆ ತಿಂಗಳಾದರೂ ಅವಳ ಉತ್ಸಾಹ ತಣೆಯಲಿಲ್ಲ, ಉಲ್ಟಾ ಜಾಸ್ತಿಯಾಯ್ತು. ಒಮ್ಮೊಮ್ಮೆ ಆಫೀಸಿನಿಂದ ದಣಿದು ಬರುತ್ತಿದ್ದ ವಿರುಪಾಕ್ಷಿಗೆ ಮತ್ತೆ ಹೊರಹೋಗುವ ಉತ್ಸಾಹ ಇರುತ್ತಿರಲಿಲ್ಲ. 'ಇಂದು ಬೇಡ, ಸುಸ್ತಾಗಿದೆ' ಅಂದಾಗ ಸಹೋದರಿಯ ಮೋರೆ ಬಾಡುವುದನ್ನು ನೋಡುವುದಕ್ಕೂ ಆಗುತ್ತಿರಲಿಲ್ಲ. ಅವನಿಗೆ ಮೂಡಿಲ್ಲದ ಒಂದಿನ 'ನಿಂಗೆ ಬೀಚು ಹುಚ್ ಹಿಡಿಸ್ತೆತಿ. ಬೇಗ ಸೈಕಲ್ಲು ಕೊಡಿಸ್ತೀನಿ. ನೀನೇ ಅಡ್ಡಾಡಿಕೊಂಡಿರು... ಸರಿ, ಈಗ ಒಬ್ಬಳೇ ಸ್ಕೂಟಿ ಮ್ಯಾಗ್ ಹುಶಾರಾಗಿ ಹೋಗ್ ಬರ್ತಿ ಏನು?' ಎಂದಿದ್ದ. ಸುಮಿಗೆ ಸಮುದ್ರದ ಮೋಹ ನಿಜಕ್ಕೂ ಹುಚ್ಚು ಹಿಡಿಸಿತ್ತು. ಅವಳು ತಡ ಮಾಡಿರಲಿಲ್ಲ. ಹಕ್ಕಿಯಂತೆ ಹಾರೇಬಿಟ್ಟಿದ್ದಳು. ಸ್ಕೂಟಿ ಸವಾರಿಗೆ ಅವಕಾಶ ಸಿಕ್ಕಮೇಲೆ ಅವಳು ಕಾರವಾರದ ಹೊಸ ಹೊಸ ತಾಣಗಳನ್ನೂ ಒಬ್ಬಳೇ ಸುತ್ತಾಡುವ ಧೈರ್ಯ ಮಾಡಿದಳು. ಗ್ರೀನ್ ಸ್ಟ್ರೀಟು, ಮಾರುತಿಗಲ್ಲಿ, ಕೋಡಿಭಾಗ, ಕಾಜುಭಾಗ, ಸಂಕ್ರುವಾಡ, ಕಡವಾಡ – ಎಲ್ಲವನ್ನೂ ಸುಮ್ಮನೇ ಅಡ್ಡಾಡಿದಳು. ಒಂದಿನ ಕಾಳಿ ಸೇತುವೆವರೆಗೂ ಹೋಗಿ ಬಂದಳು. ಏಕಾಂತದಲ್ಲಿ ಕಂಡ ಕಾಳಿ ಸಂಗಮ ಅವಳನ್ನು ಫಿದಾ ಮಾಡಿತ್ತು. ಮೊದಲೇ ಅವಳಿಗೆ ನೀಲಿ ಅಂದರೆ ಇಷ್ಟ. ಸೇತುವೆ ಮೇಲೆ ನಿಂತು ನೀಲಿ ಆಕಾಶ ಮತ್ತು ನೀಲಿ ಕಡಲು ಕಂಡಾಗ ಅವಳ ನೀಲಿ ಮೋಹ ಇನ್ನಷ್ಟು ವಿಸ್ತಾರವಾಯಿತು. ಒಂದು ಬದಿಗೆ ಮೊರೆವ ಶರಧಿ, ಇನ್ನೊಂದು ಬದಿಗೆ ಹರಿವ ಕಾಳಿನದಿ. ಈಚೆ ದೇವಭಾಗ, ಆಚೆ ನೀಲಿ–ಹಸಿರು ಸಾಲು ಪರ್ವತ. ಆಹ್, ಜಗತ್ತು ಅದೆಷ್ಟು ಸುಂದರವಾಗಿದೆ!

ಟಾಗೋರ್ ಬೀಚ್ ಮಾತ್ರವಲ್ಲ, ಬಂದು ಆರು ತಿಂಗಳಾಗುವಷ್ಟೊತ್ತಿಗೆ ವಿರುಪಾಕ್ಷಿಗೆ ವರಾತ ಹಚ್ಚಿ ಹತ್ತಿರದ ಬೀಚುಗಳನ್ನೂ ಸುತ್ತಾಡಿದಳು. ಪೋಳೆಂ ಬೀಚು, ತೀಳ್ಮಾತಿ ಬೀಚು, ಅಂಕೋಲೆಯ ಹೊನ್ನಗುಡಿ, ಬೇಲೇಕೇರಿ ಬೀಚು, ಗೋಕರ್ಣದ ಕುಡ್ಲೆ ಓಂ ಬೀಚು – ಹೀಗೆ ವಿರುಪಾಕ್ಷಿಯ ಎಲ್ಲಾ ರಜಾ ದಿನಗಳು ಅವಳಿಗೆ ಮಜಾ ದಿನಗಳಾದವು. ಸಾಗರ ಒಂದೇ ಆದರೂ ಈ ಎಲ್ಲಾ ಕಡಲ ತೀರಗಳು ಶರಧಿಯನ್ನು ಪರಿಪರಿಯಾಗಿ ಸ್ತುತಿಸುತ್ತಿವೆ ಎಂದು ಭಾಸವಾಯಿತು ಸುಮಿಗೆ. ಸಮುದ್ರ ತೀರಗಳಲ್ಲಿಯ ಉಸುಕಿನ ಗಾತ್ರ, ನುಣುಪು ಮತ್ತು ಹೊಳಪಿನ ಆಧಾರದ ಮೇಲೆ ಒಂದು ಇನ್ನೊಂದರಂತಿಲ್ಲ ಎನ್ನುವುದನ್ನು ಅವಳು ಸೂಕ್ಷ್ಮವಾಗಿ ಗಮನಿಸಿದ್ದರೂ, ತೀಳ್ಮಾತಿಯಲ್ಲಿ ಕಂಡ ಕಪ್ಪು ಮರಳು ಅವಳನ್ನು ನಿಜಕ್ಕೂ ಮರುಳು ಮಾಡಿತ್ತು. ಕಪ್ಪು ಬಣ್ಣದ ಉಸುಕಿನ ತೀರದ ಬಗ್ಗೆ ಕಾರವಾರಕ್ಕೆ ಬರುವವರೆಗೂ ಅವಳು ಕೇಳಿರಲಿಲ್ಲ. ಮಾಜಾಳಿಗೆ ಹೋಗಿ ಗುಡ್ಡ ಹತ್ತಿ, ಪುಟ್ಟ ಚಾರಣ ಕೈಗೊಂಡು ತೀಳ್ಮಾತಿ ತಲುಪಿದಾಗ ದಂಡೆಯ ಮೇಲೆ ಕಪ್ಪು ಎಳ್ಳನ್ನು ಬಿಸಿಲಿಗೆ ಬಾಡಿಸಲು ಬೀರಿರುವಂತೆ ಕಾಣುತ್ತಿತ್ತು. ವಿರುಪಾಕ್ಷಿ 'ತಜ್ಞರ ಪ್ರಕಾರ ಕಪ್ಪು ಇಗ್ನಾಸಿಯಸ್ ಬಂಡೆಗಳ ಸವೆತದಿಂದ ಕಪ್ಪು ಎಳ್ಳಿನಂತ ಸಣ್ಣ ಜಲ್ಲಿಕಲ್ಲುಗಳು ಉಂಟಾಗುತ್ತವೆ' ಎಂದು ತನ್ನ ಪುಸ್ತಕದ ಜ್ಞಾನವನ್ನು ಅರುಹಿದ. ಕೊಂಕಣಿಯಲ್ಲಿ 'ತೀಲ್' ಅಂದ್ರೆ ಎಳ್ಳು 'ಮಾತಿ', ಅಂದ್ರೆ ಮಣ್ಣು ಎಂದರ್ಥ ಎಂದು ಭಾಷಾ ಪಾಂಡಿತ್ಯವನ್ನೂ ತೋರಿಸಿದ. ಅವನಿಗೆ ಸಹೋದರಿಗೆ ತಿಳಿಯದ ಸಂಗತಿಯನ್ನು ತಿಳಿಸುವ ಅಭಿಮಾನವಿತ್ತು. ಸುಮಿಗೆ ವಿರುಪಾಕ್ಷಿಯ ವೈಜ್ಞಾನಿಕ ವಿವರಣೆ ಸಕಾರಣವೆನಿಸಿದರೂ, ಇದೇ ಬೀಚ್ ಮೇಲೆ ಯಾಕೆ ಹೀಗಿದೆ? ಸಾವಿರಾರು ಮೈಲಿ ಉದ್ದದ ಕಡಲ ತೀರದಲ್ಲಿ ಪ್ರಕೃತಿ ಈ ತೀರವನ್ನೇ ಯಾಕೆ ಆಯ್ದುಕೊಂಡಿದೆ? ಎಂಬುದೆಲ್ಲ ವಿಸ್ಮಯವೇ ಆಗುಳಿದವು.

'ಲೇಡಿ ಬರ್ಡ್' ಸೈಕಲ್ ಬಂದ ಮೇಲಂತೂ ಸುಮಿಗೆ ರೆಕ್ಕೆಗಳೇ ಬಂದಿದ್ದವು. ಸ್ಕೂಟಿಯಾದ್ರೆ ವಿರುಪಾಕ್ಷಿ ಮನೆಗೆ ಬರುವವರೆಗೂ ಕಾಯ ಬೇಕಾಗಿತ್ತು. ಈಗ ಸಂಪೂರ್ಣ ಅವಳದೇ ಮರ್ಜಿ! ಸೈಕಲ್ ಸವಾರಿಯಲ್ಲಿ ಕಾರವಾರ ಇನ್ನಷ್ಟು ಮೋಹಕವಾಗಿ ಕಂಡಿತ್ತು. ಓದಿಕೊಳ್ಳುವುದಿರಲಿ, ಏನೇ ಕೆಲಸವಿರಲಿ ಸೂರ್ಯಾಸ್ತದ ಸಮಯದಲ್ಲಿ ಮಾತ್ರ ಅವಳು ಬೀಚಿನ ಮೇಲಿರಲೇಬೇಕು. ದಿಗಂತದಲ್ಲಿ ವಿಸ್ತರಿಸುವ ಆ ವರ್ಣ ವೈಭವ, ಸೂರ್ಯ ತನ್ನ ಉಗ್ರಪ್ರತಾಪಿ ವೇಷ ಕಳಚಿ ಸೌಮ್ಯಮುಖಿಯಾಗುವ ಆ ಕ್ಷಣ ಅವಳಿಗೆ ದಿವ್ಯ ಅನಿಸುತ್ತಿತ್ತು. ದಣಿವಿಲ್ಲದ ನಿರಂತರ ತೆರೆಗಳನ್ನು ಸುಮ್ಮನೇ ನೋಡುತ್ತಿದ್ದರೂ ಅವಳಲ್ಲಿ ತಾಜಾತನದ ಸಿಂಚನವಾಗುತ್ತಿತ್ತು. ಕಡಲು ಮತ್ತು ಆಕಾಶದ ಅನೂಹ್ಯ ನೀಲಿ ನಿಚ್ಚಳ ಬಣ್ಣ ಮುಸ್ಸಂಜೆಯಲ್ಲಿ ಕೆಂಪಾಗಿ ಕಿತ್ತಳೆಯಾಗಿ ಬದಲಾಗುವ ರೀತಿ ಅವಳಿಗೆ ಸದಾ ವಿಸ್ಮಯವೇ. ಸಮುದ್ರ ಅವಳ ಪಾಲಿಗೆ ನಿತ್ಯ ನೂತನ ಭಾವವನ್ನು ಜಾಗ್ರತಗೊಳಿಸುವ ತಾಣವಾಗಿತ್ತು. ಈ ಭಾವ ನಿರಂತರವೆಂದೇ ಅಂದುಕೊಂಡಿದ್ದಳು. ಆದರೆ...

***

ಅಸೀಮ ಸಮುದ್ರ ದರ್ಶನದಿಂದಲೂ



## ರಾಜೀವ ನಾರಾಯಣ ನಾಯಕ

ಮುಂಬಯಿಯಲ್ಲಿ ನೆಲೆಸಿ ಕನ್ನಡ ಕಟ್ಟುವ ಕೆಲಸದಲ್ಲಿ ತೊಡಗಿದ 'ಕನ್ನಡ ಲೇಖಕ ಪರಂಪರೆ'ಯ ಕೊಂಡಿಯಾದ ರಾಜೀವ ನಾರಾಯಣ ನಾಯಕ ಉತ್ತರ ಕನ್ನಡದ ಅಂಕೋಲೆಯವರು. ಮುಂಬೈಯಲ್ಲಿ ಸರ್ಕಾರಿ ನೌಕರರಾಗಿದ್ದರೂ ಅವರ ಮನಸ್ಸು ಕನ್ನಡದ ಸಾಹಿತ್ಯಲೋಕದ ಕೇಂದ್ರದಲ್ಲಿ ಸುತ್ತುವಂತಹದ್ದು. ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿ, ಕಥೆ–ಪ್ರಬಂಧದಂಥ ಬರಹಗಳ ಮೂಲಕ ರಸಾಸ್ವಾದದಲ್ಲಿ ತೊಡಗಿರುವ ಸಹೃದಯಿ. 'ಗುರ್ಬಾಣಕ್ಕಿ' ಮತ್ತು 'ಲಾಸ್ಟ್ ಲೋಕಲ್ ಲೊಸ್ಟ್ ಲವ್' ಅವರ ಪ್ರಸಿದ್ಧ ಕಥಾಸಂಕಲನಗಳು. 'ಸುಧಾ ಯುಗಾದಿ ಪ್ರಬಂಧ ಸ್ಪರ್ಧೆ 2020'ರಲ್ಲಿ ಅವರ 'ಘರ್‌ಗುತಿ' ಪ್ರಬಂಧ ಎರಡನೇ ಬಹುಮಾನ ಪಡೆದಿತ್ತು. ಮುಂಬೈ ರಂಗಭೂಮಿಯಲ್ಲೂ ಸಕ್ರಿಯರಾದ ರಾಜೀವರ ಆಸಕ್ತಿಯ ಕ್ಷೇತ್ರಗಳಲ್ಲಿ ಚಾರಣವೂ ಒಂದಾಗಿದೆ. ಈಗ ಅವರ ಸಾಹಿತ್ಯಚಾರಣ ಕಾದಂಬರಿ ಪ್ರಕಾರದತ್ತ ಹೊರಳಿದ್ದು, ಅದರ ಫಲಶ್ರುತಿಯಾದ, ಭಾವಗೀತೆಯಂಥ ಕಥನಕನ್ನಡದ 'ಪ್ರೀತ್‌ಸು' ಈಗ 'ಸುಧಾ' ಓದುಗರ ಪ್ರೀತಿ ಬಯಸಿ ತೆರೆದುಕೊಳ್ಳುತ್ತಿದೆ.